**ಓ.ಎಸ್.ನಂ. 134/2019**
**ಪಿ ಡಬ್ಲ್ಯೂ 2**

**ಸಾಕ್ಷಿಯು ದಿನಾಂಕಃ 25-02-2026 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಮುಂದುವರೆದು ಮುಖ್ಯ ವಿಚಾರಣೆ ಶ್ರೀ ಕೆ ಪಿ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಗಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು ಸದರಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿ ಬರೆಯಿಸಿದ್ದು ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನಗೆ ಗೊತ್ತು ಮತ್ತು ಅದರಲ್ಲಿರುವ ಸಹಿಗಳು ನನ್ನದಾಗಿವೆ.

ನಾನು ದಿಃ 10-04-2018 ರ ದಾಖಲೆಯ ಮೇಲೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿ ನಿಪಿಃ 2(ಸಿ) ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ನನ್ನ ಸಮಕ್ಷಮ ವಾದಿ ಮತ್ತು ಲಲಿತಮ್ಮ ರೂ. 10,000/- ಹಣ ಸಂದಾಯ ಆದ ಬಗ್ಗೆ ದಾಖಲೆ ಬರೆದು ಸಹಿ ಮಾಡಿರುತ್ತಾರೆ. ಸದರಿ ದಾಖಲೆಯನ್ನು ನೊಂದಣಾಧಿಚಿಕಾರಿಗಳ ಕಚೇರಿಯಲ್ಲಿ ಬರೆದಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ.

**<u>ಪಾಟಿ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎಲ್.ಬಿ ವಕೀಲರಿಂದಃ</u>**

ಸಾಕ್ಷ್ಯ ನುಡಿಯಲು ಬರುವಂತೆ ಯಾರೂ ನನ್ನನ್ನು ಕರೆದಿರುವುದಿಲ್ಲ. ನಾನಾಗಿಯೇ ಬಂದಿರುತ್ತೇನೆ. ಪ್ರಮಾಣ ಪತ್ರವನ್ನು ನಾನೇ ತಯಾರಿಸಿ ಹಾಕಿರುತ್ತೇನೆ. ವಕೀಲರ ಬಳಿ ಹೋಗಿರಲಿಲ್ಲ ಅಂದರೆ ಸರಿ. ನನಗೆ ಒದಲು ಬಾರದ ಕಾರಣ ಪ್ರಮಾಣ ಪತ್ರದಲ್ಲಿ ಎನು ಬರೆಯಲಾಗಿದೆ ಎಂದು ಗೊತ್ತಿಲ್ಲ. ನಾನು ಮನ ಖರೀದಿ ವಿವಾರವಾಗಿ ಆದ ಕರಾರು ಪತ್ರಕ್ಕೆ ಸಹಿ ಮಾಡಿರುತ್ತೇನೆ. ಯಾವ ದಿನಾಂಕ

ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನೊಂದಾಯಿತ ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ.

ವಾದಿ ನನ್ನ ಅಳಿಯ. ವಾದಿ ಮತ್ತು ಪ್ರತಿವಾದಿ ದಾವಾ ಸ್ವತ್ತಿನ ಮಾರಾಟದ ಮಾತುಕತೆ ಮಾಡಿದಾಗ ನಾನು ಹಾಜರಿದ್ದೆ. ಸದರಿ ಮಾತುಕತೆ 2019 ರಲ್ಲಿ ಆಗಿರುತ್ತದೆ. ಆಗ ಹುಲುಗಪ್ಪ ಮತ್ತು ರಾಘವೇಂದ್ರ ಹಾಜರಿದ್ದರು. ಪತ್ರ ನೊಂದಣಿ ಆದಾಗ ವಾದಿಯೇ ಇರಲಿಲ್ಲ ಅಂದರೆ ಸರಿಯಲ್ಲ. ವಾದಿ ಅನಂತಶಯನಗುಡಿ ಗ್ರಾಮದವರು. ನಾನು ಹೊಸಪೇಟೆ ವಾಸವಿರುತ್ತೇನೆ. ನಾನು ಮತ್ತು ಪ್ರತಿವಾದಿ ಒಂದೇ ಪ್ರದೇಶದಲ್ಲಿ ವಾಸವಿರುತ್ತೇವೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಒಣಿ ಬೇರೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಮೊದಲು ಬಾಡಿಗೆ ಮನೆಯಲ್ಲಿ ಇದ್ದೆ, ಈಗ ಸ್ವಂತ ಮನೆಯಲ್ಲಿ ಇದ್ದೇನೆ. ಪ್ರತಿವಾದಿಯರ ಆಸ್ತಿ ಇರುವ ಪ್ರದೇಶದಲ್ಲಿ ಹೆಚ್ಚಿನ ಬೆಲೆಬಾಳುವ ಆಸ್ತಿಗಳು ಇರುತ್ತವೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಧ್ಯಮ ಬೆಲೆಯವು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಪ್ರದೇಶದಲ್ಲಿ ತರಕಾರಿ ಮಾರುಕಟ್ಟೆ, ಕೊಟ್ಟೂರು ಸ್ವಾಮಿ ಮಠ ಮತ್ತು ಆಸ್ಪತ್ರೆಗಳು ಇರುತ್ತವೆ ಅಂದರೆ ಸರಿ. ಅದೇ ರೀತಿ ಕಿರಾಣಿ ಅಂಗಡಿಗು ಇರುತ್ತದೆ ಅಂದರೆ ಸರಿ. ಕಾಯಿ ಅಂಗಡಿಗಳು ಸಹ ಇರುತ್ತವೆ ಅಂದರೆ ಸರಿಯಲ್ಲ.

ಪ್ರತಿವಾದಿಯರ ಮನೆ ನೋಡಿರುತ್ತೇನೆ. ಸದರಿ ಮನೆಗೆ ಹೊಂದಿಕೊಂಡು ದೇವಸ್ಥಾನ ಒಂದು ಇರುತ್ತದೆ ಅಂದರೆ ಸರಿ. ಸದರಿ ದೇವಸ್ಥಾನದ ಕಟ್ಟೆ ಇದ್ದು, ಸಾರ್ವಜನಿಕರು ಅಲ್ಲಿ ಪೂಜೆ ಸಲ್ಲಿಸುತ್ತಾರೆ ಅಂದರೆ ಸರಿ. ಸದರಿ ದೇವಸ್ಥಾನದ ನಿಗರಾಣಿಯನ್ನು ಪ್ರತಿವಾದಿಯರ ಕುಟುಂಬದವರೇ ನೋಡಿಕೊಳ್ಳುತ್ತಿದ್ದಾರೆ ಅಂದರೆ ಸರಿ. ಸುತ್ತಮುತ್ತಲೂ ವಾಸದ ಮನೆಗಳು ಇರುತ್ತವೆ ಅಂದರೆ ಸರಿ. ಸದರಿ ಆಸ್ತಿ ಪಟ್ಟಣದ ಮುಖ್ಯ ಸ್ಥಳದಲ್ಲಿ ಇರುತ್ತದೆ ಅಂದರೆ ಸರಿ.

ನಿಪಿಃ 2 ಕ್ಕೆ ಪ್ರತಿವಾದಿ ಲಲಿತಮ್ಮ ಸಹ ಮಾಡಿರುತ್ತಾರೆ. ಆಕೆಯ ಮಕ್ಕಳು ಮಾಡಿಲ್ಲ. ಲಲಿತಮ್ಮರವರಿಗೆ 3 ಜನ ಮಕ್ಕಳು. ಆಕೆಯ ಮಕ್ಕಳೆಲ್ಲಾ

ವಯಸ್ಕರಿರುತ್ತಾರೆ ಅಂದರೆ ಸರಿ. ಖರೀದಿ ಕರಾರು ಪತ್ರ ಆದಾಗ ಲಲಿತಮ್ಮರವರ ಮಕ್ಕಳು ಹಾಜರಿದ್ದು ನಿಪಿಃ 1 ಕ್ಕೆ ಸಹಿ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ರಾಘವೇಂದ್ರ ಎಂಬ ಮಗ ಸಹಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಲಲಿತಮ್ಮರವರ ಪೂರ್ವಜರ ಆಸ್ತಿ ಅಂದರೆ ಸರಿ. ನನ್ನ ಸಮಕ್ಷಮ ರೂ. 10,000/- ಗಳನ್ನು ಲಲಿತಮ್ಮ ಪಡೆದಿದ್ದು ಹೊರತುಪಡಿಸಿ ಬೇರೆ ಹಣಕಾಸಿನ ವ್ಯವಹಾರ ಆಗಿರಲಿಲ್ಲ. ವಾದಿ ರೂ. 10,000/- ಗಳನ್ನು ಕೊಟ್ಟ ಬಗ್ಗೆ ಸಹಿ ಮಾಡು ಎಂದು ಕೇಳಿದ್ದರಿಂದ ಸಹಿ ಮಾಡಿರುತ್ತೇನೆ ಅಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹಾಜರಿದ್ದು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿಃ 2 ಅನ್ನು ಯಾವ ವರ್ಷ ಬರೆಯಲಾಗಿತ್ತು ಎಂದು ನನಗೆ ನೆನಪಿಲ್ಲ. ನಿಪಿಃ 2 ರಲ್ಲಿ ಸಾಕ್ಷಿದಾರನಾಗಿ ನನ್ನ ಸಹಿ ಮಾತ್ರ ಇರುತ್ತದೆ ಅಂದರೆ ಸರಿ. ನನ್ನಗೆ ಒದಲು ಬಾರದ ಕಾರಣ ನಿಪಿಃ 2 ರಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ವಾದಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದು, ದಾವಾ ಸ್ವತ್ತು ಅತೀ ಬೆಲೆಬಾಳುವುದರಿಂದ ಹೇಗಾದರೂ ಮಾಡಿ ಅದನ್ನು ಎತ್ತಿ ಹಾಕಬೇಕು ಎಂಬ ಉದ್ದೇಶದಿಂದ ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿ ನ್ನ್ನ ಅಳಿಯನಾಗಿರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.